ಸಂಖ್ಯೆ:ತಾಂ.ಶಿ.ನಿ./ಎನ್.ಬಿ.ಎ/01/2017–18

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು–560001
ದಿನಾಂಕ:19.6.2017

## ಜ್ಞಾಪನ

ವಿಷಯ: ನಿರ್ದೇಶನಾಲಯದಲ್ಲಿ ಜರುಗುತ್ತಿರುವ ಮಾನ್ಯತಾ ಚಟುವಟಿಕೆಗಳ ಉಸ್ತುವಾರಿಯನ್ನು ಜಿಲ್ಲಾವಾರು ನಿಭಾಯಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯತಾ ಕೋಶದ ಅಧಿಕಾರಿಗಳನ್ನು ಈ ಕೆಳಕಂಡಂತೆ ಜಿಲ್ಲಾವಾರು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಹಂಚಿಕೆ ಮಾಡಿ ಇಲ್ಲಿ ಬರುವ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಮಾನ್ಯತಾ ಸಂಬಂಧಿ ಎಲ್ಲಾ ಪ್ರಕ್ರಿಯೆಗಳ ಉಸ್ತುವಾರಿಯನ್ನು ನೋಡಿಕೊಂಡು ಮಾಸಾಂತ್ಯದ ಪ್ರಗತಿಯನ್ನು ವರದಿ ಮಾಡಲು ಸೂಚಿಸಲಾಗಿದೆ.

ಮುಂದುವರೆದು, ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಎನ್‌ಬಿಎ ಸ್ಕೋರ್ ಕಾರ್ಡ್‌ನ್ನು ಪ್ರೊಗ್ರಾಂವಾರು ಪ್ರತಿ ತಿಂಗಳು ಸಂಬಂಧಪಟ್ಟ ಸಂಸ್ಥೆಗಳಿಂದ ಸಂಗ್ರಹಿಸಿ ಪ್ರತಿ ತಿಂಗಳುಗಳಲ್ಲಿ ಪಡೆದ ಕ್ರೋಢಿಕೃತ ಅಂಕಗಳ ಮಾಹಿತಿಯನ್ನು ಕಲೆಹಾಕಿ ಶ್ರೀ ಸತೀಶ್ ರ ಹುದ್ದಾರ, ಉಪ–ನಿರ್ದೇಶಕರು, ಎನ್‌ಬಿಎ ಕೋಶ ಹಾಗೂ ಜಂಟಿ ನಿರ್ದೇಶಕರು (ಆಡಳಿತ) ಇವರ ಮೂಲಕ ನಿರ್ದೇಶಕರಿಗೆ ಸಲ್ಲಿಸಲು ಸೂಚಿಸಲಾಗಿದೆ.

| ಕ್ರಸಂ | ಹೆಸರು ಮತ್ತು ಪದನಾಮ | ಹಂಚಿಕೆಯಾದ ಜಿಲ್ಲೆಗಳು |
|---|---|---|
| 1 | ಶ್ರೀ ಎಸ್.ಜಿ ವೆಂಕಟೇಶ ಬಾಬು, ಮಾನ್ಯತಾ ಸಂಯೋಜಕರು | ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳ ಸರ್ಕಾರಿ ಪಾಲಿಟೆಕ್ನಿಕ್‌ಗಳು |
| 2 | ಡಾ. ಗುರುಪ್ರಸಾದ್ ಹೂಗಾರ, ಮಾನ್ಯತಾ ಸಂಯೋಜಕರು | ಬಾಗಲಕೋಟೆ, ಬೆಂಗಳೂರು ನಗರ, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು |
| 3 | ಶ್ರೀ ಬಿ.ಎಸ್. ವಾಸುಕಿ, ಮಾನ್ಯತಾ ಸಂಯೋಜಕರು | ತುಮಕೂರು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಶಿವಮೊಗ್ಗ ದಾವಣಗೆರೆ ಜಿಲ್ಲೆಗಳ ಸರ್ಕಾರಿ ಪಾಲಿಟೆಕ್ನಿಕ್‌ಗಳು |
| 4 | ಶ್ರೀ ಭರತ್‌ಲಾಲ್ ಎ.ಆರ್, ಮಾನ್ಯತಾ ಸಂಯೋಜಕರು | ಬೀದರ್, ಕಲಬುರಗಿ, ಯಾದಗಿರಿ ಗದಗ್, ಧಾರವಾಡ, ಬೆಳಗಾವಿ, ವಿಜಯಪುರ, ಹಾವೇರಿ, ಜಿಲ್ಲೆಗಳ ಸರ್ಕಾರಿ ಪಾಲಿಟೆಕ್ನಿಕ್‌ಗಳು |
| 5 | ಶ್ರೀ ಆನಂದರಾವ್ ವಿ ಪಿಸ್ಸೆ, ಪ್ರಥಮ ದರ್ಜೆ ಸಹಾಯಕರು ಮಾನ್ಯತಾ ಹಾಗೂ ಸಾಂಖ್ಯಿಕ ಕೋಶ | ಎನ್‌ಬಿಎ ಸಂಬಂಧ ಎಲ್ಲಾ ಕಡತಗಳ ನಿರ್ವಹಣೆ ಹಾಗೂ ಕಡತಗಳ ಮಂಡನೆ. |

ನಿರ್ದೇಶಕರು

ಇವರಿಗೆ:

1. ಎಲ್ಲಾ ಜಂಟಿ ನಿರ್ದೇಶಕರು ಇವರ ಮಾಹಿತಿಗಾಗಿ
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಮಾಹಿತಿಗಾಗಿ
3. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ
4. ಇ–ಆಡಳಿತ ಕೋಶದ ಸಂಯೋಜಕರ ಸೂಕ್ತ ಕ್ರಮಕ್ಕಾಗಿ